ಡಿ ಡಬ್ಲ್ಯೂ : 1

ದಿನಾಂಕ : 11.02.2021 ರಂದು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

ಪಾಟೀ ಸವಾಲು : ವಾದಿ ಪ**ರವಾಗಿ ಶ್ರೀ ಎಲ್ ಆರ್ ಎನ್ ವಕೀಲರಿಂದ,**

ನನ್ನ ಸ್ವಂತ ಊರು ಎರಂಗಳ್ಳಿ ಗ್ರಾಮ ಎಂದರೆ ನಿಜ. ಎರಂಗಳ್ಳಿ ಗ್ರಾಮದಿಂದ ಸಿದ್ದಮ್ಮನ ಹಳ್ಳಿ ಸುಮಾರು 4 ರಿಂದ 5 ಕಿ.ಮೀ ಅಂತರದಲ್ಲಿದೆ. ಎರಂಗಳ್ಳಿ ಗ್ರಾಮ ಮತ್ತು ಸಿದ್ದಮ್ಮನ ಹಳ್ಳಿ ಗ್ರಾಮದಲ್ಲಿರುವವರಿಗೆ ಮದುವೆಯ ಸಂಬಂಧ ಹಾಗೂ ಇತರೆ ಸಂಬಂಧಗಳು ಇವೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ನನಗೆ ರಾಮಪುರದ ಹನಮಂತ ರೆಡ್ಡಿ ಹಾಗುಾ ಅವರ ತಂದೆ ರಾಮಪುರದ ಭೀಮಪ್ಪ ರವರ ಪರಿಚಯವಿದೆ ಎಂದರೆ ಸರಿಯಲ್ಲ. ಎರಂಗಳ್ಳಿ ಗ್ರಾಮದ ಎಂ. ನಾಗರೆಡ್ಡಿ ತಂದೆ ದಿ.ಸೊಮರೆಡ್ಡಿ ರವರ ಪರಿಚಯ ನನಗೆ ಇದೆ ಎಂದರೆ ಸಾಕ್ಷಿ ನನಗೆ ಅವರ ಪರಿಚಯ ಇರುವುದಿಲ್ಲ, ಆದರೆ ಅವರು ಎರಂಗಳ್ಳಿ ಗ್ರಾಮದಲ್ಲಿ ವಾಸ ಮಾಡುತ್ತಾರೆ. ನಾನು ಸದರಿ ನಾಗರೆಡ್ಡಿ ತಂದೆ ದಿ.ಸೊಮರೆಡ್ಡಿ ರವರನ್ನು ನೋಡಿರುತ್ತೇನೆ ಎಂದರೆ ನಿಜ. ನನ್ನ ಪ್ರತಿವಾದ ಪತ್ರದಲ್ಲಿ ಹಾಗೂ ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ಗಂಡ ವಾದಿಯಿಂದ 9 ಲಕ್ಷ ರೂ.ಗಳನ್ನು ಸಾಲ ಪಡೆದಿರುತ್ತಾರೆ ಎಂದು ನಿಮಗೆ ಯಾರು ತಿಳಿಸಿದರು ಎಂದರೆ ಸಾಕ್ಷಿ ನನ್ನ ಗಂಡ 2013 ರಲ್ಲಿ ಈ ವಿಚಾರವನ್ನು ನನಗೆ ತಿಳಿಸಿದ್ದು, 2014 ರಲ್ಲಿ ಮೃತ ಪಟ್ಟಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಗಂಡ ಸಾಲವನ್ನು ಪಡೆದಾಗ ಪತ್ರ ವನ್ನು ಬರೆದುಕೊಟ್ಟ ಬಗ್ಗೆ ವಿಚಾರ ಮಾಡಿರುತ್ತೀರಾ ಎಂದರೆ ಸಾಕ್ಷಿ ಅವರು ಹೇಗೊ ಸಾಲವನ್ನು ತೆಗೆದುಕೊಂಡ ಬಂದಿರುತ್ತಾರೆ, ಆದರೆ ಪತ್ರ ಬರೆದುಕೊಟ್ಟ ಬಗ್ಗೆ ವಿಚಾರ ಮಾಡಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ ಈಗ ನಾನು ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನ ಸಹಿ ಎಂದರೆ ಸಾಕ್ಷಿ ಅದು ನನಗೆ ಗೊತಾಗುತ್ತಿಲ್ಲ. ನಾನು ಯಾವುದರೂ ಮೇಲೂ ಸಹಿ ಮಾಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ-1 ರಿಂದ 5 ರಲ್ಲಿರುವ ಸಹಿಗಳನ್ನು ಸಾಕ್ಷಿಗೆ ತೋರಿಸಿದ್ದು ಸದರಿ ಸಹಿಗಳು ನನ್ನ ಸಹಿಗಳಾಗಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪ್ರಸುತ ಪ್ರಕರಣದಲ್ಲಿ ಅವರು ಸಲ್ಲಸಿರುವ ವಕಾಲತ್ ನಾಮೆವನ್ನು ತೋರಿಸಿದ್ದು ಸದರಿ ವಕಾಲತ್ ನಾಮೆಯಲ್ಲಿರು ಸಹಿ ನನ್ನ ಸಹಿ ಎಂದರೆ ಸಾಕ್ಷಿ ನಾನು ಆ ರೀತಿ ಯಾವುದರೂ ಮೇಲೂ ಸಹಿ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ರಾಮಪುರದ ಹನುಮಂತ ರೆಡ್ಡಿ ಮತ್ತು ನಾವು ಪರಿಚಯಸ್ಥರಾಗಿದ್ದು ಒಂದೇ ಕುಲಸ್ಥರಾಗಿರುತ್ತೇನೆ ಎಂದರೆ ಸಾಕ್ಷಿ ನಾವು ಕುಲಸ್ಥರಾಗಿರುವುದು ನಿಜ ಎನ್ನುತ್ತಾರೆ. ದಿನಾಂಕ 24.04.2016

ರಂದು ನಾನು ಮತ್ತು ನನ್ನ ಮಗ ವ್ಯವಸಾಯಕಾಕಗಿ ವಾದಿಯ ಬಳಿ 5,15,000/- ರೂ.ಸಾಲ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ವಾದಿಯಿಂದ 5,15,000/- ರೂ.ಗಳನ್ನು ಸಾಲ ಪಡೆದ ದಿನವೇ 5 ಪ್ರಾಂಸರಿ ನೋಟ್ ಗಳನ್ನು ನಾನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಶಿವಪ್ರಸಾದ ಮತ್ತು ಮಲ್ಲಿಕಾರ್ಜುನ ನಿಮಗೆ ಪರಿಚಯವಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ ನನಗೆ ಇಬ್ಬರು ಮಕ್ಕಳಿದ್ದು ಅವರ ಹೆಸರು ರಾಜರೆಡ್ಡಿ ಅಲಿಯಾಸ ರಾಜಶೇಖರ ಮತ್ತು ಶಿವಪ್ರಸಾದ ಆಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಶಿವಪ್ರಸಾದನಿಗೆ ಈಗ 21 ವರ್ಷ ವಯಸ್ಸಾಗಿರುತ್ತದೆ. ನನ್ನ ಮಗ ಶಿವಪ್ರಸಾದನ ಸಹಿಯನ್ನು ಗುರುತಿಸುತ್ತೀರಾ ಎಂದರೆ ಸಾಕ್ಷಿ ನನ್ನ ಮಗನ ಕಾಲೇಜು ಓದುತ್ತಿದ್ದು ಅವರ ಸಹಿಯನ್ನು ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

ವಾದಿಯೂ ನಾನು ಅವರಿಂದ 5,15,000/- ರೂ.ಗಳನ್ನು ಸಾಲ ಪಡೆದಿದ್ದು ಅದನ್ನು ಹಿಂದಿರಿಗಿಸಿ ಎಂದು ಅವರ ವಕೀಲರ ಮುಖಾಂತರ ನಮಗೆ ನೋಟಿಸ್ ಕಳುಹಿಸಿರುತ್ತಾರೆ ಎಂದರೆ ನಿಜ. ಸದರಿ ನೋಟಿಸ್ ನಮಗೆ ತಲುಪಿದ ನಂತರ ನಾವು ವಾದಿಗೆ ವಕೀಲರಾದ ರಾಘವೇಂದ್ರರವರ ಮುಖಾಂತರ ಜವಾಬು ನೋಟಿಸ್‌ನ್ನು ಕೊಟ್ಟಿರುತ್ತೇನೆ. ನಾನು ವಾದಿಯಿಂದ 5,15,000/- ರೂಗಳನ್ನು ಸಾಲ ಪಡೆದಿದ್ದು ಅದನ್ನು ಅವರಿಗೆ ಹಿಂದಿರುಗಿಸಬೇಕಾಗುತ್ತದೆಎಂಬ ಕಾರಣದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಸಮಕ್ಷಮದಲ್ಲಿ 5,15,000/- ರೂ ಗಳನ್ನು ಸಾಲ ಪಡೆದು ಪ್ರಾಂಸರಿ ಪತ್ರ ಗಳನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ

**ಮರುವಿಚಾರಣೆ ಃ ಇರುವುದಿಲ್ಲ.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

**2** ನೇ ಹೆ ಹಿ ಸಿವಿಲ್ ಜಡ್ಜ್, ಬಳ್ಳಾರಿ